# ಕರ್ನಾಟಕ ವಿಧಾನ ಪರಿಷತ್ತು

| | |
|---|---|
| ಮಾನ್ಯ ಸದಸ್ಯರ ಹೆಸರು | : ಡಾ: ಎಂ.ಜಿ.ಮುಳೆ (ವಿಧಾನ ಸಭೆಯಿಂದ ಚುನಾಯಿತರಾದವರು) |
| ಚುಕ್ಕೆ ಗುರುತಿಲ್ಲದ ಪ್ರಶ್ನೆ ಸಂಖ್ಯೆ | : **1288** |
| ಉತ್ತರಿಸಬೇಕಾದ ದಿನಾಂಕ | : 19.03.2025 |
| ಉತ್ತರಿಸಬೇಕಾದ ಸಚಿವರು | : ವಸತಿ, ವಕ್ಫ್ ಮತ್ತು ಅಲ್ಪಸಂಖ್ಯಾತರ ಕಲ್ಯಾಣ ಸಚಿವರು |

<table>
<tr><th>ಕ್ರ.ಸಂ</th><th>ಪ್ರಶ್ನೆ</th><th>ಉತ್ತರ</th></tr>
<tr><td>ಅ)</td><td>ರಾಜ್ಯದಲ್ಲಿ ಗೃಹ ನಿರ್ಮಾಣ ಮಂಡಳಿ ವತಿಯಿಂದ ವಸತಿ ನಿರ್ಮಾಣ ಮಾಡಲು ಯಾವ ಯಾವ ಯೋಜನೆಗಳಿವೆ ; ಕಳೆದ ಮೂರು ವರ್ಷಗಳಲ್ಲಿ ಎಷ್ಟು ವಸತಿಗಳು ನಿರ್ಮಾಣವಾಗಿವೆ; (ಜಿಲ್ಲಾವಾರು ಮಾಹಿತಿ ನೀಡುವುದು)</td><td>ಕರ್ನಾಟಕ ಗೃಹ ಮಂಡಳಿ ವತಿಯಿಂದ ವಸತಿ ನಿರ್ಮಾಣ ಮಾಡಲು ಯಾವುದೇ ನಿರ್ದಿಷ್ಟವಾದ ಯೋಜನೆ ಇರುವುದಿಲ್ಲ ಹಾಗೂ ವಸತಿ ಯೋಜನೆಗಳಿಗೆ ಸರ್ಕಾರದಿಂದ ಯಾವುದೇ ಅನುದಾನ ಇರುವುದಿಲ್ಲ. ಕರ್ನಾಟಕ ಗೃಹ ಮಂಡಳಿಯು ಬೇಡಿಕೆ ಆಧಾರದ ಮೇಲೆ ಮನೆಗಳನ್ನು ನಿರ್ಮಿಸುತ್ತಿದ್ದು, ನಿವೇಶನಗಳಿಗೆ ಹೆಚ್ಚಿನ ಬೇಡಿಕೆ ಇರುತ್ತದೆ.<br><br>ಕರ್ನಾಟಕ ಗೃಹ ಮಂಡಳಿಯು ಹೆಚ್ಚಿನ ನಿವೇಶನಗಳನ್ನು ರಚಿಸುತ್ತಿದ್ದು, ಬಡಾವಣೆಯಲ್ಲಿ ಶೀಘ್ರವಾಗಿ ನಿವೇಶನದಾರರು ಮನೆಗಳನ್ನು ನಿರ್ಮಿಸಿ ಅಭಿವೃದ್ಧಿ ಹೊಂದುವ ಸಲುವಾಗಿ ಮಾದರಿ ಮನೆಗಳನ್ನು ಮಾತ್ರ ನಿರ್ಮಿಸಲಾಗುತ್ತಿದೆ. ಕಳೆದ 3 ವರ್ಷಗಳಿಂದ ಕರ್ನಾಟಕ ಗೃಹ ಮಂಡಳಿಯಿಂದ 14 ಮನೆಗಳು ಹಾಗೂ 120 ಫ್ಲ್ಯಾಟ್‌ಗಳನ್ನು ನಿರ್ಮಿಸಲಾಗಿರುತ್ತದೆ ವರ್ಗವಾರು ವಿವರ ಕೆಳಕಂಡಂತಿದೆ.</td></tr>
<tr><td>ಆ)</td><td>ಯಾವ ಯಾವ ವರ್ಗದವರಿಗೆ ಎಷ್ಟೆಷ್ಟು ಮನೆಗಳನ್ನು ನಿರ್ಮಿಸಲಾಗಿದೆ; ಎಷ್ಟು ಮನೆಗಳನ್ನು ಹಂಚಿಕೆ ಮಾಡಲಾಗಿದೆ; (ಜಿಲ್ಲಾವಾರು ಮಾಹಿತಿಯನ್ನು ನೀಡುವುದು)</td><td>
<table>
<tr><th>ಕ್ರ.ಸಂ</th><th>ಯೋಜನೆ</th><th>ಕಡಿಮೆ ಆದಾಯ ವರ್ಗ (LIC)</th><th>ಮಧ್ಯಮ ಆದಾಯ ವರ್ಗ (MIG)</th></tr>
<tr><td>1.</td><td>ಕೊರಂಗ್ರಪಾಡಿ, ಉಡುಪಿ ತಾಲ್ಲೂಕು</td><td>2</td><td>2</td></tr>
<tr><td>2.</td><td>ಸೂರ್ಯನಗರ 2 ನೇ ಹಂತದ ರಾಜಾಪುರ, ಆನೇಕಲ್ ತಾಲ್ಲೂಕು</td><td>5</td><td>5</td></tr>
<tr><td>3.</td><td>ಗದಗ ಬೆಟಗೇರಿ ಗುಂಪು ವಸತಿ ಯೋಜನೆ</td><td>120 (ಫ್ಲ್ಯಾಟ್‌ಗಳು-2 BHK)</td><td>-</td></tr>
</table>
<br>ಹಂಚಿಕೆ ಮಾಡಿರುವ ಮನೆಗಳ ವಿವರಗಳು :-<br>
<table>
<tr><th rowspan="2">ಕ್ರ. ಸಂ</th><th rowspan="2">ಜಿಲ್ಲೆ</th><th rowspan="2">ಬಡಾವಣೆ</th><th colspan="2">ನಿರ್ಮಿಸಿರುವ ಸ್ವತ್ತುಗಳು</th></tr>
<tr><th>ಮನೆ</th><th>ಫ್ಲಾಟ್</th></tr>
<tr><td>1.</td><td>ಉಡುಪಿ</td><td>ಕೊರಂಗ್ರಪಾಡಿ, ಉಡುಪಿ ತಾಲ್ಲೂಕು</td><td>04</td><td>-</td></tr>
<tr><td>2.</td><td>ಬೆಂಗಳೂರು ನಗರ</td><td>ಸೂರ್ಯನಗರ 2 ನೇ ಹಂತದ ರಾಜಾಪುರ, ಆನೇಕಲ್ ತಾಲ್ಲೂಕು</td><td>10</td><td>-</td></tr>
<tr><td>3.</td><td>ಗದಗ</td><td>ಗದಗ ಬೆಟಗೇರಿ ಗುಂಪು ವಸತಿ ಯೋಜನೆ (2 BHK)</td><td></td><td>120</td></tr>
<tr><td colspan="3">ಒಟ್ಟು</td><td>14</td><td>120</td></tr>
</table>
</td></tr>
<tr><td>ಇ)</td><td>ಗೃಹ ಮಂಡಳಿಯಿಂದ ನಿರ್ಮಿಸುವ ಮನೆಗಳು ಕಳಪೆ ಗುಣಮಟ್ಟದಿಂದ ಕೂಡಿರುತ್ತವೆ ಎಂಬ ಅನುಮಾನ ಸಾರ್ವಜನಿಕರಲ್ಲಿದ್ದು, ಇದನ್ನು ಹೋಗಲಾಡಿಸಲು ಸರ್ಕಾರ ಯಾವ ಕ್ರಮ ಕೈಗೊಂಡಿದೆ ?</td><td>ಕರ್ನಾಟಕ ಗೃಹ ಮಂಡಳಿಯು ರಾಜ್ಯದಾದ್ಯಂತ ನಿರ್ಮಿಸಿರುವ ಮನೆಗಳು ಉತ್ತಮ ಗುಣಮಟ್ಟದಿಂದ ಕೂಡಿರುತ್ತವೆ. ಸದರಿ ಕಾಮಗಾರಿಗಳ ಗುಣಮಟ್ಟ ಕಾಯ್ದು ಕೊಳ್ಳಲು ಯೋಜನಾ ಉಸ್ತುವಾರಿ ಸಂಸ್ಥೆಯನ್ನು (3 ನೇ ತಪಾಸಣಾ ವ್ಯಕ್ತಿ) ಇ-ಪ್ರೊಕ್ಯೂರ್‌ಮೆಂಟ್ ಮೂಲಕ ನೇಮಿಸುತ್ತಿದ್ದು, ಮನೆಗಳ ನಿರ್ಮಾಣಕ್ಕೆ ಬಳಸಲಾಗುವ ಸಾಮಗ್ರಿಗಳನ್ನು ಕಾಲ ಕಾಲಕ್ಕೆ ಪರೀಕ್ಷೆ ಮಾಡಿಸಲಾಗುತ್ತಿದೆ ಹಾಗೂ ಗುಣಮಟ್ಟವನ್ನು ಕಾಯ್ದುಕೊಳ್ಳಲಾಗುತ್ತಿದೆ.</td></tr>
</table>

ಸಂಖ್ಯೆ :ವಇ 54 ಕಗೃಮಂ 2025

(ಬಿ.ಜೆಡ್.ಜಮೀರ್ ಅಹ್ಮದ್ ಖಾನ್)
ವಸತಿ, ವಕ್ಫ್ ಮತ್ತು ಅಲ್ಪಸಂಖ್ಯಾತರ
ಕಲ್ಯಾಣ ಸಚಿವರು